## ಗೆಟ್ ರೆಡಿ



ಶಾಲೆಯಲ್ಲಿ ನಾಟಕದ ತಾಲಿಮು ನಡೆದಿತ್ತು. ಕಿತ್ತೂರುರಾಣಿ ಚೆನ್ನಮ್ಮ ಮತ್ತು ಬ್ರಿಟೀಷ್ ಅಧಿಕಾರಿ ಥ್ಯಾಕರೆಯ ಸಂಭಾಷಣೆಯನ್ನು ಇಬ್ಬರು ಮಕ್ಕಳು ನಡೆಸುತ್ತಿದ್ದರು. ಸಂಭಾಷಣೆಯ ಕೊನೆಗೆ ಥ್ಯಾಕರೆಯು, 'ಚೆನ್ನಮ್ಮ... ನಾವು ಯುದ್ಧ ಮಾಡಲು ಬರುತ್ತಿದ್ದೇವೆ, ಗೆಟ್ ರೆಡಿ! ಗೆಟ್ ರೆಡಿ!' ಎಂದು ಹೇಳಬೇಕಿತ್ತು. ತರಬೇತಿದಾರರು ಮಕ್ಕಳನ್ನು ಕರೆದು, 'ಈ ಸಂಭಾಷಣೆಯನ್ನು ಹೇಳಿ ನೋಡೋಣ' ಅಂದಾಗ ಥ್ಯಾಕರೆಯ ಪಾತ್ರಧಾರಿ ಕೊನೆಯ ಮಾತನ್ನು, 'ಚೆನ್ನಮ್ಮ... ನಾವು ಯುದ್ಧ ಮಾಡಲು ಬರುತ್ತಿದ್ದೇವೆ, ಗೇಟ್ ತೆಗಿ! ಗೇಟ್ ತೆಗಿ!' ಎಂದಾಗ ನಗೆಯ ಅಲೆ ಉಕ್ಕಿತು.

**ಸಂತೆಬೆನ್ನೂರು ಮಂಜಪ್ಪ ಭದ್ರಾವತಿ**

---

## ಪ್ಯಾಂಟಿಗೆ ಹೆಚ್ಚು ರೇಟು

ನಮ್ಮ ಅತ್ತಿಗೆ ಧಾರವಾಡಕ್ಕೆ ಬಂದಾಗೆಲ್ಲಾ ಇಲ್ಲಿನ ಎಪಿಎಂಸಿ ತರಕಾರಿ ಮಾರುಕಟ್ಟೆಯಲ್ಲಿ ಹೋಲ್‌ಸೇಲ್ ದರದಲ್ಲಿ ತರಕಾರಿ ಕೊಂಡು ಕಾರಲ್ಲಿ ತುಂಬಿಸಿಕೊಂಡು ಬೆಂಗಳೂರಿಗೆ ಹೋಗುತ್ತಾರೆ. ಹೀಗೆ, ಆದಿನ ತರಕಾರಿ ತರಲು ನಾವಿಬ್ಬರೂ ಹೋಗಿದ್ದೆವು.



ತರಕಾರಿ ಬೆಲೆ ನಾನು ಕೇಳಿದರೆ ಕೇಜಿಗೆ 30, 35 ಹೇಳುವವರು, ಅತ್ತಿಗೆ ಕೇಳಿದರೆ 55, 60 ಹೇಳುತ್ತಿದ್ದರು. ಒಂದು ಕಡೆ ಹಾಗೇ ಆಯಿತು. ಬೆಳ್ಳುಳ್ಳಿ ನಾನು ಕೇಳಿದಾಗ ಕೇಜಿಗೆ 35 ಅಂದವನು, ಅತ್ತಿಗೆ ಕೇಳಿದರೆ 50 ಅಂದ. 'ಯಾಕಪ್ಪ? ಅವರು ಕೇಳಿದರೆ 35 ಅಂದೆ, ನಾನು ಕೇಳಿದಾಗ 50 ಅಂತೀಯ?' ಎಂದು ಕೇಳಿಯೇ ಬಿಟ್ಟರು. 'ಅದು ಹಂಗೇ ಮೇಡಂ ಅವರೆ' ಅಂದ. 'ಅದೇ ಯಾಕೆ ಹಾಗೆ?' ಎಂದರು. 'ನಾನೊಬ್ಬನೇ ಅಲ್ಲ, ಇಲ್ಲಿ ಹೆಣ್ಮಕ್ಕಳು ಪ್ಯಾಂಟ್ ಹಾಕ್ಕೊಂಡು ಬಂದ್ರೆ ರೇಟು ಜಾಸ್ತಿ' ಅಂದ. 'ಓ, ಹಾಗಾದರೆ ಸೀರೆಗೆ ಒಂದು ರೇಟು, ಪ್ಯಾಂಟ್‌ಗೆ ಒಂದು ರೇಟಾ?' ಕೇಳಿದರು. 'ಇಲ್ಲ ಮೇಡಂನವರೆ, ಪ್ಯಾಂಟ್‌ಗೆ ಮಾತ್ರ ರೇಟು ಜಾಸ್ತಿ' ಅಂದ ಗಂಭೀರವಾಗಿ!

**ಜ್ಯೋತಿ ಪರಬತ್**